ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

**ಒಟ್ಟು ಪ್ರಶ್ನೆಗಳು – ೩೬**

**ಪಟ್ಟಿ – ೦೩**

# ಕರ್ನಾಟಕ ವಿಧಾನ ಪರಿಷತ್ತು

ನೂರ ಇಪ್ಪತ್ತೈದನೇ ಅಧಿವೇಶನ

**ಬುಧವಾರ, ದಿನಾಂಕ : ೨೫ನೇ ಜೂನ್, ೨೦೧೪**

---

## ಸಮೂಹ – III

೧. ಅರಣ್ಯ ಸಚಿವರು

೨. ಕಂದಾಯ ಸಚಿವರು

೩. ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು

೪. ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು

೫. ಸಣ್ಣ ನೀರಾವರಿ ಸಚಿವರು

೬. ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು

೭. ಕಾರ್ಮಿಕ ರಾಜ್ಯ ಸಚಿವರು

## ಜವಳಿ ಪಾರ್ಕ್‌ಗಳ ಕುರಿತು

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :-**

೪೬ (೦೬) ಮಾನ್ಯ ಜವಳಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಇದುವರೆಗೆ ಎಷ್ಟು ಜವಳಿ ಪಾರ್ಕ್‌ಗಳನ್ನು ಸ್ಥಾಪಿಸಲಾಗಿದೆ (ಜಿಲ್ಲಾವಾರು ವಿವರ ನೀಡುವುದು) ;

(ಆ) ಸದರಿ ಜವಳಿ ಪಾರ್ಕ್‌ಗಳಿಗಾಗಿ ಎಷ್ಟು ವೆಚ್ಚ ಮಾಡಲಾಗಿದೆ ; ಇದರಿಂದ ಸರ್ಕಾರಕ್ಕೆ ಇದುವರೆಗೆ ಎಷ್ಟು ಆದಾಯ ಬಂದಿದೆ ?

## ಹೆದ್ದಾರಿ ಅಗಲೀಕರಣ : ಮರಗಳ ಕಡಿತ

**ಶ್ರೀ ಸಿ.ಹೆಚ್. ವಿಜಯ ಶಂಕರ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೪೭ (೭೭) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯ ಹಾಗೂ ರಾಷ್ಟ್ರೀಯ ಹೆದ್ದಾರಿ ಅಗಲೀಕರಣದ ಸಂದರ್ಭದಲ್ಲಿ ರಸ್ತೆಯ ಎರಡೂ ಬದಿಗಳಲ್ಲಿ ಬೆಳೆದು ನಿಂತ ಸಾಲು ಮರಗಳನ್ನು ತೆರವುಗೊಳಿಸುವ ಕುರಿತು ಸದ್ಯ ಜಾರಿಯಲ್ಲಿರುವ ನಿಯಮಗಳೇನು ;

(ಆ) ಕಳೆದ ೧೦ ವರ್ಷಗಳಲ್ಲಿ ಹೆದ್ದಾರಿ ಅಗಲೀಕರಣದ ಕಾರಣಕ್ಕಾಗಿ ರಾಜ್ಯದಲ್ಲಿ ಕತ್ತರಿಸಿ ಹಾಕಲಾದ ಒಟ್ಟು ಮರಗಳ ಸಂಖ್ಯೆ ಎಷ್ಟು ;

(ಇ) ರಸ್ತೆ ಅಗಲೀಕರಣ ಪೂರ್ಣಗೊಂಡ ನಂತರ ಸಕಾಲದಲ್ಲಿ ರಸ್ತೆಯ ಎರಡೂ ಬದಿಗಳಲ್ಲಿ ಪುನಃ ಮರಗಳನ್ನು ನೆಟ್ಟು ಬೆಳೆಸಲು ಹಾಗೂ ಯಥಾಸ್ಥಿತಿ ಕಾಯ್ದುಕೊಳ್ಳಲು ತೆಗೆದುಕೊಳ್ಳುತ್ತಿರುವ ಕ್ರಮಗಳೇನು ;

(ಈ) ಸಕಾಲದಲ್ಲಿ ಪುನಃ ಮರಗಳನ್ನು ನೆಟ್ಟು ಬೆಳೆಸಲು ವಿಫಲರಾದಲ್ಲಿ ಈ ಜವಾಬ್ದಾರಿಯನ್ನು ಹೇಗೆ ನಿರ್ವಹಿಸಲಾಗುತ್ತದೆ ; ಹಾಗೂ ಇಂತಹ ಸನ್ನಿವೇಶಗಳಲ್ಲಿ ಇಲಾಖೆ ತೆಗೆದುಕೊಳ್ಳಬಹುದಾದ ಕಾನೂನಾತ್ಮಕ ಕ್ರಮಗಳೇನು ?

## ಅಳಿವಿನಂಚಿನಲ್ಲಿರುವ ಔಷಧೀಯ ಗುಣಗಳುಳ್ಳ ಪ್ರಭೇದಗಳು

**ಶ್ರೀ ಸಿ.ಹೆಚ್. ವಿಜಯ ಶಂಕರ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೪೮ (೦೭) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಅಳಿವಿನಂಚಿನಲ್ಲಿರುವ ಔಷಧಿ ಗುಣಗಳುಳ್ಳ ಪ್ರಭೇದಗಳು ಯಾವುವು ಎಂಬುದನ್ನು ಗುರುತಿಸಲಾಗಿದೆಯೇ ;

(ಆ) ಈ ಅಳಿವಿನಂಚಿನಲ್ಲಿರುವ ಪ್ರಭೇದಗಳನ್ನು (ಔಷಧಿ ಗುಣವುಳ್ಳ ಸಸ್ಯ ರಾಶಿಯನ್ನು) ಉಳಿಸಿಕೊಳ್ಳಲು ಮತ್ತು ಯಥಾಸ್ಥಿತಿ ಕಾಪಾಡಿಕೊಳ್ಳಲು ಇಲಾಖೆ ತೆಗೆದುಕೊಂಡ ಹಾಗೂ ತೆಗೆದುಕೊಳ್ಳುತ್ತಿರುವ ಯೋಜನಾ ಬದ್ಧ ಕ್ರಮಗಳೇನು ;

(ಇ) ಸಾಂದರ್ಭಿಕವಾಗಿ ಹಾಗೂ ಸಾಮೂಹಿಕವಾಗಿ ಮರಗಳನ್ನು ಕತ್ತರಿಸಿ ಹಾಕಲಾಗುವ ಸನ್ನಿವೇಶಗಳಲ್ಲಿ ಈ ಪ್ರಭೇದಗಳನ್ನು ಗುರುತಿಸಿ ಹಾಗೂ ಅವುಗಳನ್ನು ಉಳಿಸಿಕೊಳ್ಳಲು ಇಲಾಖೆ ಹಾಲಿ ಅನುಸರಿಸುತ್ತಿರುವ ನಿಯಮಗಳೇನು ;

(ಈ) ಈ ರೀತಿ ಅಳಿವಿನಂಚಿನಲ್ಲಿರುವ ಔಷಧಿ ಗುಣಗಳುಳ್ಳ ಪ್ರಭೇದಗಳನ್ನು ಜಾಗತಿಕ ಬೇಡಿಕೆಗೆ ತಕ್ಕಂತೆ ಅಭಿವೃದಿಪಡಿಸಲು ಇಲಾಖೆಯ ಯೋಜನಾ ರೂಪುರೇಷೆಗಳೇನು ?

## ಒಳ ಕ್ರೀಡಾಂಗಣ ನಿರ್ಮಾಣ

**ಶ್ರೀ ಬಿ. ರಾಮಕೃಷ್ಣ ( ಸ್ಥಳೀಯ ಸಂಸ್ಥೆಯಿಂದ ಚುನಾಯಿತರಾದವರು) :–**

೪೯ (೮೧) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಂಡ್ಯ ನಗರದಲ್ಲಿ ಒಳ ಕ್ರೀಡಾಂಗಣ ನಿರ್ಮಾಣ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದರೆ, ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿಪಡಿಸಿರುವ ಅನುದಾನವೆಷ್ಟು ;

(ಇ) ಪೂರ್ಣಗೊಳಿಸಬೇಕಾದ ಅವಧಿಯನ್ನು ಪೂರ್ಣ ವಿವರಗಳೊಂದಿಗೆ ತಿಳಿಸುವುದು ;

(ಈ) ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲು ಕಳೆದ ಅಧಿವೇಶನದಲ್ಲಿ ಸರ್ಕಾರದ ಗಮನಕ್ಕೆ ತರಲಾಗಿದ್ದರೂ ಕಾಮಗಾರಿಯು ಪೂರ್ಣಗೊಳ್ಳದಿರಲು ಕಾರಣಗಳೇನು (ಈ ಬಗ್ಗೆ ಪೂರ್ಣ ಮಾಹಿತಿ ನೀಡುವುದು) ?

## ಗ್ರಾಮ ಸಹಾಯಕರ ವೇತನ

**ಶ್ರೀ ಬಿ. ರಾಮಕೃಷ್ಣ ( ಸ್ಥಳೀಯ ಸಂಸ್ಥೆಯಿಂದ ಚುನಾಯಿತರಾದವರು) :–**

೫೦ (೮೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಕಂದಾಯ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಗ್ರಾಮ ಸಹಾಯಕರಿಗೆ ನೀಡುತ್ತಿರುವ ವೇತನವೆಷ್ಟು ;

(ಆ) ಸದರಿ ಗ್ರಾಮ ಸಹಾಯಕರಿಗೆ ೫–೬ ತಿಂಗಳುಗಳಿಂದ ವೇತನ ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದರೆ, ಗ್ರಾಮ ಸಹಾಯಕರಿಗೆ ವೇತನ ನೀಡಲು ಸರ್ಕಾರಕ್ಕೆ ಇರುವ ತೊಂದರೆಗಳೇನು ?

## ವನ್ಯ ಜೀವಿಗಳ ತಡೆಗೆ ತಡೆಗೋಡೆ ನಿರ್ಮಾಣ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದರು) :–**

೫೧ (೮೫) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಾಡಂಚಿನಿಂದ ನಾಡು ಪ್ರವೇಶಿಸುವ ಆನೆಗಳೂ ಸೇರಿದಂತೆ ವನ್ಯ ಜೀವಿಗಳ ತಡೆಗಾಗಿ ಹಳೆಯ ರೈಲ್ವೆಹಳಿಗಳ ಮೂಲಕ ತಡೆಗೋಡೆ ರಚಿಸುವ ಯೋಜನೆ ಸರ್ಕಾರದ ಮುಂದಿದೆಯೇ ;

(ಆ) ಇದ್ದಲ್ಲಿ, ಅವುಗಳ ಯೋಜನಾ ವೆಚ್ಚವೆಷ್ಟು ; ಅಂತಹ ಪ್ರದೇಶದ ವ್ಯಾಪ್ತಿಯೆಷ್ಟು (ವಿವರ ನೀಡುವುದು) ?

## ಅಕ್ರಮ ಸಕ್ರಮ ಸಮಿತಿ ರಚನೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದರು) :–**

೫೨ (೮೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಅಕ್ರಮ ಸಕ್ರಮ ಸಮಿತಿಗಳನ್ನು ವಿಧಾನ ಸಭಾ ಕ್ಷೇತ್ರವಾರು ರಚಿಸುವ ನಿರ್ಧಾರವನ್ನು ಅನುಷ್ಠಾನಗೊಳಿಸಲಾಗಿಯೇ ;

(ಆ) ಈಗಾಗಲೇ ರಾಜ್ಯದಲ್ಲಿ ಎಷ್ಟು ಅಕ್ರಮ ಸಕ್ರಮ ಸಮಿತಿಗಳು ರಚನೆಯಾಗಿವೆ ;

(ಇ) ಅವುಗಳು ತಮ್ಮ ಕಾರ್ಯಾರಂಭ ಮಾಡಿವೆಯೇ ;

(ಈ) ಅಕ್ರಮ ಸಕ್ರಮ ಸಮಿತಿ ರಚನೆ ಮಾಡದಿರುವ ಕಡೆ ಯಾವಾಗ ರಚಿಸಲಾಗುವುದು ?

## ಬಾಲಕಾರ್ಮಿಕ ಪದ್ಧತಿಯ ನಿರ್ಮೂಲನೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದರು) :-**

೫೩ (೮೩) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಾಲಕಾರ್ಮಿಕ ಪದ್ಧತಿ ನಿವಾರಣೆ ಮಾಡಲು ಸರ್ಕಾರ ಕೈಗೊಂಡ ಯೋಜನೆಗಳು ಯಾವುವು ;

(ಆ) ಒಂದು ವರ್ಷದಿಂದ ಬಾಲಕಾರ್ಮಿಕ ಕಾರ್ಯದಡಿ ಎಷ್ಟು ಪ್ರಕರಣಗಳಲ್ಲಿ ಕ್ರಮಕೈಗೊಳ್ಳಲಾಗಿದೆ ;

(ಇ) ಈ ಕಾಯಿದೆಯ ದುರುಪಯೋಗವಾಗುವುದು ಮತ್ತು ವಿನಾಕಾರಣ ತಪ್ಪೆಸಗದಿರುವವರನ್ನು ಶಿಕ್ಷಿಸುವ ಪ್ರಕರಣಗಳನ್ನು ಸರ್ಕಾರ ಗಮನಿಸಿದೆಯೇ ;

(ಈ) ಒಟ್ಟಾರೆ ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆ ಹಾಗೂ ಇಲಾಖೆಯ ದಕ್ಷತೆಗೆ ಸರ್ಕಾರದ ಕ್ರಮವೇನು ?

## ಭೂನ್ಯಾಯ ಮಂಡಳಿಗಳ ರಚನೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದರು) :-**

೫೪ (೮೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಎಷ್ಟು ಭೂನ್ಯಾಯ ಮಂಡಳಿಗಳಿವೆ (ತಾಲ್ಲೂಕುವಾರು ಪ್ರತ್ಯೇಕ ವಿವರ ನೀಡುವುದು) ;

(ಆ) ಈ ಭೂನ್ಯಾಯ ಮಂಡಳಿಗಳನ್ನು ರಚಿಸಿ ಕಾರ್ಯೋನ್ಮುಖ ಮಾಡಲು ಸರ್ಕಾರ ವಿಳಂಬ ಮಾಡುತ್ತಿರುವುದೇಕೆ ;

(ಇ) ಅವಳಿ ಜಿಲ್ಲೆಗಳಲ್ಲಿ ಭೂನ್ಯಾಯ ಮಂಡಳಿಯ ಮೂಲಕ ಇತ್ಯರ್ಥವಾಗಬೇಕಾದ ಪ್ರಕರಣಗಳೆಷ್ಟು (ಜಿಲ್ಲಾವಾರು, ತಾಲ್ಲೂಕುವಾರು ಪ್ರತ್ಯೇಕ ವಿವರ ನೀಡುವುದು) ?

## ಜಿಲ್ಲೆಗೊಂದು ಜವಳಿ ಪಾರ್ಕ್ ಯೋಜನೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) :-**

೫೫ (೮೬) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಜಿಲ್ಲೆಗೊಂದು ಜವಳಿ ಪಾರ್ಕ್ ಯೋಜನೆ ಯಾವ ಹಂತದಲ್ಲಿದೆ ;

(ಆ) ಜವಳಿ ಪಾರ್ಕ್ ಯೋಜನೆಯ ಅನುಷ್ಠಾನದಿಂದ ಸಮಾಜಕ್ಕಾಗುವ ಸಹಕಾರವೇನು ;

(ಇ) ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಈಗಾಗಲೇ ಜವಳಿ ಪಾರ್ಕ್ ರಚನೆಯಾಗಿದೆ ;

(ಈ) ಯಾವ ಯಾವ ಜಿಲ್ಲೆಗಳಲ್ಲಿ ರಚನೆಯಾಗಬೇಕಾಗಿದೆ ;

(ಉ) ಜಿಲ್ಲೆಗೊಂದು ಜವಳಿ ಪಾರ್ಕ್ ಯೋಜನೆಯನ್ನು ಎಂದು ಪೂರ್ಣಗೊಳಿಸಲಾಗುವುದು (ಪೂರ್ಣ ವಿವರ ನೀಡುವುದು) ?

## ಇನಾಂ ಭೂಮಿ ತೆರವುಗೊಳಿಸುವಲ್ಲಿ ಆಗಿರುವ ಸಮಸ್ಯೆಗಳು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :-**

೫೬ (೧೩೧) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಚಿಕ್ಕಮಗಳೂರಿನಲ್ಲಿ ಇನಾಂ ಭೂಮಿ ತೆರವುಗೊಳಿಸಲು ಮುಂದಾಗಿರುವುದು ನಿಜವೆ ; ಪ್ರಮುಖ ಕಾರಣವೇನು ;

(ಆ) ಪ್ರಸ್ತುತ ಎಷ್ಟು ಕುಟುಂಬಗಳನ್ನು ತೆರವುಗೊಳಿಸಲಾಗಿದೆ ;

(ಇ) ಇದರ ವ್ಯಾಪ್ತಿಯಲ್ಲಿ ಒಟ್ಟು ಎಷ್ಟು ಕುಟುಂಬಗಳು ಬರುತ್ತವೆ ;

(ಈ) ಅವರು ಜೀವನ ಸಾಗಿಸಲು ಮಾಡುವ ಪ್ರಮುಖ ಕಸುಬು ಏನು ?

## ಖಾಸಗಿಯಾಗಿ ಶ್ರೀಗಂಧದ ಬೆಳೆ

**ಶ್ರೀ ಗೋ. ಮಧುಸೂದನ್ (ಪದವೀಧರರ ಕ್ಷೇತ್ರ) :-**

೫೭ (೯೪) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಶ್ರೀಗಂಧವನ್ನು ಖಾಸಗಿಯವರು ಬೆಳೆಸಲು ಅರಣ್ಯ ಇಲಾಖೆಯ ಅನುಮತಿ ಅವಶ್ಯವಿದೆಯೇ ;

(ಆ) ಖಾಸಗಿಯವರು ಬೆಳೆದ ಶ್ರೀಗಂಧವನ್ನು ಕಟಾವು ಮಾಡಲು ಮತ್ತು ಮಾರಾಟ ಮಾಡಲು ಇಲಾಖೆಯ ಅನುಮತಿ ಅಗತ್ಯವಿದೆಯೇ ;

(ಇ) ರೈತರು ಮುಕ್ತವಾಗಿ ಶ್ರೀಗಂಧವನ್ನು ಬೆಳೆಯಲು, ಮಾರಾಟ ಮಾಡಲು ಅನುಮತಿ ನೀಡುವ ವಿಚಾರ ಸರ್ಕಾರದ ಮುಂದಿದೆಯೇ ?

## ಕಂಪನಿಗಳಿಗೆ ಕರ ರಿಯಾಯಿತಿ (Tax Rebate)

**ಡಾ॥ ಎಂ.ಆರ್. ಹುಲಿನಾಯ್ಕರ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) :-**

೫೮ (೯೫) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಳೆದ ೧೦ ವರ್ಷಗಳಲ್ಲಿ ರಾಜ್ಯ ಸರ್ಕಾರದಿಂದ ಎಷ್ಟು ಕಂಪನಿಗಳಿಗೆ ಕರ (Tax Rebate) ರಿಯಾಯಿತಿ ಕೊಡಲಾಗಿದೆ (ವಿವರ ನೀಡುವುದು) ;

(ಆ) ಅದರಿಂದ ರಾಜ್ಯದ ಎಷ್ಟು ಜನರಿಗೆ ಉದ್ಯೋಗದ ಅವಕಾಶವಾಗಿದೆ ;

(ಇ) ಇದರಿಂದ ಸರ್ಕಾರಕ್ಕೆ ಏನು ಅನುಕೂಲವಾಗಿದೆ ?

## ತಲೆ ಪರಕೆಗಳು (ನೀರಿನ ಬುಗ್ಗೆ)

**ಡಾ॥ ಎಂ.ಆರ್. ಹುಲಿನಾಯ್ಕರ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) :-**

೫೯ (೯೬) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಎಷ್ಟು ತಲೆಪರಕೆಗಳಿವೆ (ನೀರಿನ ಬುಗ್ಗೆ) ; (ಜಿಲ್ಲಾವಾರು ಮಾಹಿತಿ ನೀಡುವುದು) ;

(ಆ) ಅದರ ಬಗ್ಗೆ ಭೂ ವಿಜ್ಞಾನದವರು ಸರ್ವೆ ಮಾಡಿ ಗುರುತಿಸಿದ್ದಾರೆಯೇ ;

(ಇ) ಅವುಗಳ ಉಪಯುಕ್ತತೆ (ಕುಡಿಯುವ ನೀರಿನ ಸಣ್ಣ ನೀರಾವರಿ) ಹೆಚ್ಚಿಸಲಿಕ್ಕೆ ಸರ್ಕಾರ ಏನಾದರೂ ಕ್ರಮ ತೆಗೆದುಕೊಂಡಿದೆಯೇ ?

## ಅನುಕಂಪ ಆಧಾರದ ನೇಮಕಾತಿ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) ಮತ್ತು ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ):–**

೬೦ (೯೮) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ಅರಣ್ಯ ಕೈಗಾರಿಕೆ ಅಭಿವೃದ್ಧಿ ನಿಗಮದಲ್ಲಿ ಅನುಕಂಪ ಆಧಾರದ ಎಷ್ಟು ಪ್ರಕರಣಗಳು ಬಾಕಿ ಇವೆ ;

(ಆ) ಹಾಗಿದ್ದಲ್ಲಿ, ಅರ್ಜಿದಾರರು ಅರ್ಜಿ ಸಲ್ಲಿಸಿದ ದಿನಾಂಕ, ಹೆಸರು ಸಮೇತ ವಿವರ ನೀಡುವುದು ;

(ಇ) ಈಗಾಗಲೇ ಎಷ್ಟು ಜನರನ್ನು ನೇಮಕ ಮಾಡಲಾಗಿದೆ ;

(ಈ) ಬಾಕಿ ಇರುವ ಅರ್ಜಿಗಳನ್ನು ಎಷ್ಟು ದಿನದಲ್ಲಿ ಇತ್ಯರ್ಥ ಮಾಡಲಾಗುವುದು ?

## ನೇಕಾರರ ಮಿತವ್ಯಯ ನಿಧಿ ಬಿಡುಗಡೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :-**

೬೧ (೯೭) ಮಾನ್ಯ ಜವಳಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಕೈಮಗ್ಗ ಅಭಿವೃದ್ಧಿ ನಿಗಮದಿಂದ ನೇಕಾರರಿಗೆ ಮಿತವ್ಯಯ ನಿಧಿ ಬಿಡುಗಡೆ ಆಗದೇ ತೊಂದರೆಗೀಡಾಗಿರುವುದು ನಿಜವೇ ;

(ಆ) ೨೦೧೨-೧೩ ಮತ್ತು ೨೦೧೩-೧೪ನೇ ಸಾಲುಗಳಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳ ಮಿತವ್ಯಯ ನಿಧಿ ಬಿಡುಗಡೆ ಮಾಡದೇ ಇರುವ ಹಣ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು) ;

(ಇ) ಆಯಾ ವರ್ಷಕ್ಕೆ ಮಿತವ್ಯಯ ಬಿಡುಗಡೆ ಮಾಡದಿರಲು ಕಾರಣವೇನು ;

(ಈ) ಮಿತವ್ಯಯ ನಿಧಿ ಬಡ್ಡಿ ಹಣ ಸಿಗದ ನೇಕಾರರು, ಆತ್ಮಹತ್ಯೆಗೆ ಪ್ರಯತ್ನ ಪಟ್ಟಿರುವುದು ನಿಜವೇ ;

(ಉ) ಹಾಗಿದ್ದಲ್ಲಿ ಎಷ್ಟು ದಿನಗಳಲ್ಲಿ ಹಣ ಬಿಡುಗಡೆ ಮಾಡಲಾಗುವುದು ?

## ಸಿ.ಎಸ್.ಪುರ ಕೆರೆ ಒತ್ತುವರಿ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :-**

೬೨ (೧೦೧) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಗುಬ್ಬಿ ತಾಲ್ಲೂಕು, ಸಿ.ಎಸ್.ಪುರ ಗ್ರಾಮಕ್ಕೆ ಹೊಂದಿಕೊಂಡಿರುವ ದೊಡ್ಡಕೆರೆ ಎಷ್ಟು ಎಕರೆ ವಿಸ್ತೀರ್ಣದಲ್ಲಿದೆ ;

(ಆ) ಸಿ.ಎಸ್.ಪುರ ದೊಡ್ಡಕೆರೆ ಹಿಂಭಾಗ ಜಮೀನು ಒತ್ತುವರಿ ಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ (ವಿವರ ಒದಗಿಸುವುದು) ;

(ಇ) ಈ ಕೆರೆಯು ಸುಮಾರು ಎಷ್ಟು ಎಕರೆ ನೀರಾವರಿ ಪ್ರದೇಶಕ್ಕೆ ಹೇಮಾವತಿ ನೀರನ್ನು ಒದಗಿಸುತ್ತದೆ ;

(ಈ) ಸದರಿ ಕೆರೆಯು ಹೂಳು ತುಂಬಿದ್ದು, ನೀರು ನಿಲ್ಲಲು ಸಾಧ್ಯವಾಗಿರುವುದಿಲ್ಲ ಹಾಗೂ ಈ ಕೆರೆಯ ಕೋಡಿ ಕಲ್ಲುಗಳು ಕಿತ್ತು ಬಂದಿದ್ದು ; ಕೆರೆಯಲ್ಲಿ ನೀರು ನಿಲ್ಲದೆ ಪೋಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ತೆಗೆದುಕೊಂಡ ಕ್ರಮವೇನು; ಇಲ್ಲದಿದ್ದಲ್ಲಿ, ಯಾವಾಗ ಕ್ರಮ ಕೈಗೊಳ್ಳಲಾಗುವುದು ;

(ಉ) ಈ ಕೆರೆಯಿಂದ ಎಷ್ಟು ಪ್ರಮಾಣದಲ್ಲಿ ಕುಡಿಯುವ ನೀರಿಗೆ ಆದೇಶ ಮಾಡಲಾಗಿದೆ ; ಬೆಳೆಗೆ ಎಷ್ಟು ನೀರು ಒದಗಿಸಲಾಗುವುದು (ವಿವರ ನೀಡುವುದು) ?

**ಇಡಗೂರು ಗ್ರಾಮದ ಗುಂಡು ತೋಪು ಒತ್ತುವರಿ**

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :–**

೬೩ (೯೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :--

(ಅ) ಗುಬ್ಬಿ ತಾಲ್ಲೂಕು ಸಿ.ಎಸ್.ಪುರ ಹೋಬಳಿ, ಇಡಗೂರು ಗ್ರಾಮದ ವ್ಯಾಪ್ತಿಯಲ್ಲಿ ಗುಂಡು ತೋಪು ಅತಿಕ್ರಮಣ ಮಾಡಿ, ಒತ್ತುವರಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ (ವಿವರ ಒದಗಿಸುವುದು) ;

(ಆ) ಇಡಗೂರು ಗ್ರಾಮದ ಮಜರೆ ಹಾರನಪಾಳ್ಯದಲ್ಲಿರುವ ಗುಂಡು ತೋಪು ಜಮೀನಿನಲ್ಲಿ ಫಸಲು ಬಿಡುವ ತೆಂಗಿನ ಮರಗಳನ್ನು ಅತಿಕ್ರಮವಾಗಿ ಒತ್ತುವರಿ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ; ಹಾಗಿದ್ದಲ್ಲಿ, ತೆಗೆದುಕೊಂಡಿರುವ ಕ್ರಮವೇನು (ವಿವರ ಒದಗಿಸುವುದು) ;

(ಇ) ಈ ಗುಂಡು ತೋಪಿನ ಬಗ್ಗೆ ಗ್ರಾಮಸ್ಥರುಗಳು ದೂರನ್ನು ಸಲ್ಲಿಸಿದ್ದರೂ ಸಹ ಅಧಿಕಾರಿಗಳು ಇದರ ಬಗ್ಗೆ ಗಮನ ಹರಿಸದಿರಲು ಕಾರಣವೇನು (ವಿವರ ಒದಗಿಸುವುದು) ?

## ಇಡಗೂರು ಗ್ರಾಮದ ಕೆರೆ ಒತ್ತುವರಿ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :–**

೬೪ (೧೦೦) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗುಬ್ಬಿ ತಾಲ್ಲೂಕು, ಸಿ.ಎಸ್. ಪುರ ಹೋಬಳಿ, ಇಡಗೂರು ಗ್ರಾಮದ ಕೆರೆ ಒತ್ತುವರಿಯ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಕೆರೆ ಒತ್ತುವರಿಯಾಗಿದ್ದು, ಸುಮಾರು ಎಕರೆ ಜಮೀನು ಅಕ್ರಮವಾಗಿ ಬೇರೆಯವರ ಪಾಲಾಗಿರುವುದು ನಿಜವೇ ;

(ಇ) ಕೆರೆಯ ಏರಿ ಮತ್ತು ಕೋಡಿಯ ಕಲ್ಲುಗಳು ಕಿತ್ತು ಬಂದಿದ್ದು, ಕೆರೆಯಲ್ಲಿ ನೀರು ನಿಲ್ಲದೆ ಪೋಲಾಗುತ್ತಿರುವ ಬಗ್ಗೆ ಇಲಾಖೆಯ ಅಧಿಕಾರಿಗಳು ಗಮನ ಹರಿಸದಿರಲು ಕಾರಣವೇನು ;

(ಈ) ಕೆರೆಯಲ್ಲಿ ಗಿಡಮರಗಳು ಬೆಳೆದು ನೀರು ನಿಲ್ಲಲು ಸಾಧ್ಯವಾಗದಿರುವ ಬಗ್ಗೆ ಇಲಾಖೆ ತೆಗೆದುಕೊಳ್ಳುವ ಕ್ರಮಗಳೇನು ;

(ಉ) ಕೆರೆಯಿಂದ ಸಂಪರ್ಕ ಕಲ್ಪಿಸುವ ಕಾಲುವೆಗಳು ಸಹ ಹೂಳು ತುಂಬಿದ್ದು, ಇಲಾಖೆ ತೆಗೆದುಕೊಳ್ಳುವ ಕ್ರಮವೇನು ?

## ಕಾವೇರಿ ನದಿ ದಾಟಲು ಮೋಟಾರ್ ಬೋಟ್ ಸೌಲಭ್ಯ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) :-**

೬೫ (೧೦೭) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕೊಳ್ಳೇಗಾಲ ತಾಲ್ಲೂಕು, ದಾಸನಪುರದ ಬಳಿ ಕಾವೇರಿ ನದಿ ದಾಟಲು ಸಾರ್ವಜನಿಕರಿಗೆ ಒದಗಿಸಿರುವ ಮೋಟಾರ್ ಬೋಟ್ ಆಗಾಗ್ಗೆ ಕೆಟ್ಟು ಹೋಗಿ ಸುಮಾರು ೨೦ ಹಳ್ಳಿಗಳ ಜನರಿಗೆ ನದಿ ದಾಟಲು ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ಕಡವಿನಲ್ಲಿ ಸಾರ್ವಜನಿಕರು, ವಿದ್ಯಾರ್ಥಿಗಳು, ವ್ಯಾಪಾರಸ್ಥರು, ನದಿ ದಾಟಲು ಅನುಕೂಲವಾಗುವಂತೆ ಎರಡು ಸುಸಜ್ಜಿತ ಮೋಟಾರ್ ಬೋಟ್ ವ್ಯವಸ್ಥೆಯನ್ನು ಖಾಯಂ ಆಗಿ ಕಲ್ಪಿಸಿ ಅನುಕೂಲ ಮಾಡಿಕೊಡಲು ಸಂಭವನೀಯ ಜಲ ದುರಂತಗಳಿಂದ ರಕ್ಷಣೆ ನೀಡಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ ?

## ಗೋಶಾಲೆಗಳು ಮತ್ತು ಅನುದಾನ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) :-**

೬೬ (೧೦೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಚಾಮರಾಜನಗರ ಜಿಲ್ಲೆಯ ನಾಲ್ಕು ವಿಧಾನ ಸಭಾ ಕ್ಷೇತ್ರಗಳಲ್ಲಿ ಎಂಟು ಗೋಶಾಲೆಗಳನ್ನು ತೆರೆಯಲು (ತಲಾ ಎರಡರಂತೆ) ತೀರ್ಮಾನಿಸಲಾಗಿದೆಯೇ ; ಇದಕ್ಕಾಗಿ ಒದಗಿಸಿರುವ ಅನುದಾನ ಎಷ್ಟು ; ಜಿಲ್ಲೆಯಲ್ಲಿ ಮೇವಿನ ಲಭ್ಯತೆ ಇದೆಯೇ ;

(ಆ) ಗೋಶಾಲೆಗಳ ವಿವರ ; ಈ ಗೋಶಾಲೆಗಳಲ್ಲಿರುವ ಗೋವುಗಳ ಜಾನುವಾರುಗಳ ಸಂಖ್ಯೆ ; ಇಲ್ಲಿ ದಾಸ್ತಾನು ಮಾಡಿರುವ ಮೇವಿನ ವಿವರ ; ಈ ಗೋಶಾಲೆಯನ್ನು ನಿರ್ವಹಿಸಲು ನೇಮಿಸಿರುವ ಸಿಬ್ಬಂದಿಯ ವಿವರಗಳನ್ನು ಒದಗಿಸುವುದು, ಗೋಶಾಲೆಗಳನ್ನು ಯಾವಾಗಿನಿಂದ ತೆರೆಯಲಾಗಿದೆ ;

(ಇ) ಈ ಗೋಶಾಲೆಗಳಿಗೆ ಒದಗಿಸಿರುವ ಅನುದಾನ ಎಷ್ಟು (ವಿವರ ಒದಗಿಸುವುದು) ?

## ಜಿಲ್ಲಾ ಸ್ಟೇಡಿಯಂ ಕಾಮಗಾರಿ

**ಶ್ರೀ ಎಸ್. ನಾಗರಾಜ್ (ಸಂದೇಶ ನಾಗರಾಜ್) ( ಸ್ಥಳೀಯ ಸಂಸ್ಥೆಯಿಂದ ಚುನಾಯಿತರಾದವರು) :-**

೬೭ (೧೦೮) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಚಾಮರಾಜನಗರ ಜಿಲ್ಲಾ ಸ್ಟೇಡಿಯಂ ಕಾಮಗಾರಿಗಳು ಪೂರ್ಣ ಆಗಿದೆಯೆ ; ಕಾಮಗಾರಿಗಳ ಹೆಸರು, ಒದಗಿಸಲಾದ ಅನುದಾನ, ಇದುವರೆಗೆ ಆಗಿರುವ ವೆಚ್ಚ ವಿವರಗಳನ್ನು ಒದಗಿಸುವುದು ;

(ಆ) ಜಿಲ್ಲಾ ಸ್ಟೇಡಿಯಂ ಕಾಮಗಾರಿ ಯಾವಾಗ ಆರಂಭವಾಯಿತು ; ಯಾವಾಗ ಮುಕ್ತಾವಾಯಿತು ; ಇಷ್ಟೊಂದು ವಿಳಂಬಕ್ಕೆ ಕಾರಣಗಳೇನು ; ವಿಳಂಬಕ್ಕೆ ಕಾರಣರು ಯಾರು ಎಂಬುದನ್ನು ಸರ್ಕಾರ ಗುರುತಿಸಿದೆಯೇ ;

(ಇ) ಉಳಿದಿರುವ ಕಾಮಗಾರಿಗಳು ಯಾವುವು ; ಈ ಕಾಮಗಾರಿಗಳನ್ನು ಪೂರ್ಣಗೊಳಿಸಿ ಸುಸುಜ್ಜಿತ ಕ್ರೀಡಾಂಗಣ ನಿರ್ಮಿಸಲು ಕ್ರಮ ವಹಿಸಲಾಗುವುದೇ ?

## ಕ್ರೀಡಾಂಗಣ ಮತ್ತು ಭಿನ್ನ ಸಾಮರ್ಥ್ಯದ ಕ್ರೀಡೋತ್ಸವ ಕುರಿತು

**ಶ್ರೀ ಅರುಣ ಶಹಾಪುರ ( ಶಿಕ್ಷಕರ ಕ್ಷೇತ್ರ ) :-**

೭೮ (೧೧೧) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಇಂಡಿ ನಗರದಲ್ಲಿ ನಿರ್ಮಿಸಲಾಗಿರುವ ಕ್ರೀಡಾಂಗಣಕ್ಕೆ ಸರ್ಕಾರದಿಂದ ಒದಗಿಸಿರುವ ಹಣ ಎಷ್ಟು ಮತ್ತು ಅದರಲ್ಲಿ ಖರ್ಚು ಮಾಡಿರುವ ಹಣವೆಷ್ಟು ;

(ಆ) ಕ್ರೀಡಾಂಗಣ ಕಾಮಗಾರಿ ಪ್ರಗತಿಯ ವಿವರ ನೀಡುವುದು. ಕ್ರೀಡಾ ಚಟುವಟಿಕೆ ಯಾವಾಗ ಸಿದ್ಧವಾಗುವುದು ;

(ಇ) ಭಿನ್ನ ಸಾಮರ್ಥ್ಯದ (ಅಂಗವಿಕಲ, ಬುದ್ಧಿ ಮಾಂದ್ಯ, ಹಿರಿಯರು) ಕ್ರೀಡೋತ್ಸವ ನಡೆಸಲು ಸರ್ಕಾರದಿಂದ ಧನ ಸಹಾಯ ನೀಡಲಾಗುತ್ತಿದೆಯೇ ; ಇವರ ಕ್ರೀಡೋತ್ಸವ ನಡೆಸುವ ಕುರಿತು ಸರ್ಕಾರದ ನೀತಿಯೇನು ;

(ಈ) ಬಿಜಾಪೂರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಯಾವ ಯಾವ ತಾಲ್ಲೂಕು ಕೇಂದ್ರಗಳಲ್ಲಿ ಕ್ರೀಡಾಂಗಣವನ್ನು ನಿರ್ಮಿಸಲಾಗಿದೆ ಅಥವಾ ನಿರ್ಮಿಸಲಾಗುವುದೇ (ವಿವರ ನೀಡುವುದು) ?

F-2

## ನೇಕಾರರಿಗೆ ಒದಗಿಸಿರುವ ಮೂಲಭೂತ ಸೌಕರ್ಯಗಳು

**ಶ್ರೀ ಅರುಣ ಶಹಾಪುರ ( ಶಿಕ್ಷಕರ ಕ್ಷೇತ್ರ ) :-**

೬೯ (೧೧೩) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ :-

ಬಿಜಾಪುರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ನೇಕಾರರಿಗೆ ಒದಗಿಸಿರುವ ಮೂಲಭೂತ ಸೌಕರ್ಯಗಳ ವಿವರವನ್ನು ಸ್ಥಳವಾರು ನೀಡುವುದು ?

## ಐ.ಟಿ.ಐ., ಕಾಲೇಜುಗಳ ಪ್ರವೇಶಾತಿ

**ಶ್ರೀ ಅರುಣ ಶಹಾಪುರ ( ಶಿಕ್ಷಕರ ಕ್ಷೇತ್ರ ) :-**

೭೦ (೧೧೨) ಮಾನ್ಯ. ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಖಾಸಗಿ ಅನುದಾನಿತ ಹಾಗೂ ಅನುದಾನ ರಹಿತ ಹಾಗೂ ಸರ್ಕಾರಿ ಐ.ಟಿ.ಐ. ಕಾಲೇಜುಗಳ ಪ್ರವೇಶಾತಿ ಕ್ರಮಗಳೇನು ; ಶುಲ್ಕ ಸಂರಚನೆ ಏನು ; ಸೀಟು ಹಂಚಿಕೆ ರೋಷ್ಟರ್ ಪಾಲನೆ ಕುರಿತು ಸರ್ಕಾರದ ನೀತಿ ಏನು ;

(ಆ) ಐ.ಟಿ.ಐ ಶಿಕ್ಷಕರಿಗೆ ನೀಡಬೇಕಾದ ಸೌಲಭ್ಯಗಳ ಕುರಿತು ಥಾಮಸ್ ವರದಿಯ ಶಿಫಾರಸ್ಸುಗಳೇನು ;

(ಇ) ಥಾಮಸ್ ವರದಿಯ ಜಾರಿಗೆ ಸರ್ಕಾರ ತೆಗೆದುಕೊಂಡ ಕ್ರಮವೇನು ?

## ತುಂಗಭದ್ರಾ ಜಲಾಶಯದಲ್ಲಿ ತುಂಬಿರುವ ಹೂಳು

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) :-**

೭೧ (೧೧೭) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ತುಂಗಭದ್ರಾ ಜಲಾಶಯದಲ್ಲಿ ಸದ್ಯ ತುಂಬಿರುವ ಹೂಳಿನ ಪ್ರಮಾಣ ಎಷ್ಟು ;

(ಆ) ಪ್ರತಿ ವರ್ಷ ಶೇಖರಣೆಯಾಗುತ್ತಿರುವ ಹೂಳಿನ ಪ್ರಮಾಣ ಎಷ್ಟು; ಇದರ ಅಂದಾಜು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಈ ಜಲಾಶಯದಿಂದ ಹೂಳೆತ್ತುವ ವಿಚಾರ ಪ್ರಸ್ತುತ ಯಾವ ಹಂತದಲ್ಲಿದೆ ;

(ಈ) ಸರ್ಕಾರ ಈ ಕುರಿತು ರೂಪಿಸಿದ ಯೋಜನೆಗಳ ಮಾಹಿತಿಯನ್ನು ನೀಡುವುದು ;

(ಉ) ಸಮಾನಂತರ ಜಲಾಶಯಗಳನ್ನು ನಿರ್ಮಾಣ ಮಾಡುವ ವಿಚಾರ ಪ್ರಸ್ತುತ ಯಾವ ಹಂತದಲ್ಲಿದೆ ?

## ಕೃಷ್ಣಾ ಬಿ. ಸ್ಕೀಂ ಏತ ನೀರಾವರಿ ಕಾಮಗಾರಿ ಪ್ರಗತಿ

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) :–**

೭೨ (೧೧೫) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೃಷ್ಣಾ ಬಿ.ಸ್ಕೀಂ ನಲ್ಲಿರುವ ಕೊಪ್ಪಳ ಏತ ನೀರಾವರಿ ಯೋಜನೆಯ ಕಾಮಗಾರಿಯ ಸದ್ಯದ ಪ್ರಗತಿ ಏನು ;

(ಆ) ಸದರಿ ಯೋಜನೆಯಲ್ಲಿ ನೀರಾವರಿಗೊಳಪಡುವ ಕ್ಷೇತ್ರ ಎಷ್ಟು ;

(ಇ) ಹುನಗುಂದ ತಾಲ್ಲೂಕಿನಿಂದ ಕುಷ್ಟಗಿ ತಾಲ್ಲೂಕಿಗೆ ಸಂಪರ್ಕ ಕಲ್ಪಿಸುವ ಮಧ್ಯೆ ೧೦ ಕಿ.ಮೀ. ತೆರೆದ ಕೆನಾಲ್ ಕಾಮಗಾರಿಯನ್ನು ಕೈಬಿಡುವ ವಿಚಾರ ಸದ್ಯ ಯಾವ ಹಂತದಲ್ಲಿದೆ ;

(ಈ) ಸದರಿ ಕಾಮಗಾರಿಯನ್ನು ಬದಲಾಯಿಸದೇ ಇದ್ದಲ್ಲಿ, ಕೊನೆ ಭಾಗದ ರೈತರಿಗೆ ನೀರಿನ ಹಂಚಿಕೆಯಲ್ಲಿ ಅನ್ಯಾಯವಾಗುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಬಂದಿದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು ?

## ನೆಲಜೇರಿ ಕೆರೆಯ ಕಾಮಗಾರಿ

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) :–**

೭೩ (೧೧೪) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಪ್ಪಳ ಜಿಲ್ಲೆ, ಯಲಬುರ್ಗಾ ತಾಲ್ಲೂಕಿನ ನೆಲಜೇರಿ ಕೆರೆಯ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡಿದ್ದು ಯಾವಾಗ ;

(ಆ) ಸದರಿ ಕೆರೆಗೆ ಇಲ್ಲಿಯವರೆಗೂ ಖರ್ಚಾದ ಅನುದಾನದ ಪ್ರಮಾಣ ಎಷ್ಟು ;

(ಇ) ಸದರಿ ಕೆರೆಯ ಗುತ್ತಿಗೆ ಕರಾರಿನನ್ವಯ ಕಾಮಗಾರಿಯನ್ನು ಯಾವ ದಿನಾಂಕಕ್ಕೆ ಲೋಕಾರ್ಪಣೆ ಮಾಡಬೇಕಿತ್ತು ;

(ಈ) ಈ ಕೆರೆಯ ಕಾಮಗಾರಿ ಸದ್ಯ ಯಾವ ಹಂತದಲ್ಲಿದೆ ; ಕಾಮಗಾರಿ ಮುಕ್ತಾಯಗೊಳಿಸಿ ಲೋಕಾರ್ಪಣೆ ಮಾಡಲಾಗಿದೆಯೇ ;

(ಉ) ಇಲ್ಲವಾದಲ್ಲಿ ವಿಳಂಬಕ್ಕೆ ಕಾರಣಗಳೇನು ;

(ಊ) ಪ್ರಸಕ್ತ ಸಾಲಿನಲ್ಲಿ ಕೆರೆಯ ದುರಸ್ತಿಗಾಗಿ ಮತ್ತೆ ಅನುದಾನವೇನಾದರೂ ಬಿಡುಗಡೆಗೊಳಿಸಲಾಗಿದೆಯೇ ?

## ಸಣ್ಣ ನೀರಾವರಿ ಇಲಾಖಾ ಯೋಜನೆಗಳು

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) :-**

೭೪ (೧೧೬) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕೊಪ್ಪಳ ಜಿಲ್ಲೆಯಲ್ಲಿ ನೀರಾವರಿ ಇಲಾಖೆಗೆ ೨೦೧೨-೧೩, ೨೦೧೩-೧೪ನೇ ಸಾಲಿನಲ್ಲಿ ಎಲ್.ಐ.ಎಸ್. ಯೋಜನೆಯಲ್ಲಿ ಸ್ವೀಕೃತವಾದ ಅನುದಾನ ಎಷ್ಟು ;

(ಆ) ಸ್ವೀಕೃತವಾದ ಅನುದಾನವನ್ನು ಯಾವ ಯಾವ ಯೋಜನೆಗಳಿಗೆ ವಿನಿಯೋಗಿಸಲಾಗಿದೆ (ತಾಲ್ಲೂಕುವಾರು ಮಾಹಿತಿ ನೀಡುವುದು) ;

(ಇ) ಏತ ನೀರಾವರಿ ಯೋಜನೆಗಾಗಿ ಯೋಜನಾ ನಿರ್ವಹಣಾ ವೆಚ್ಚದಲ್ಲಿ ವಿದ್ಯುತ್‌ಗಾಗಿ ಪಾವತಿಸಲಾದ ಅನುದಾನ ಎಷ್ಟು ;

(ಈ) ಪ್ರಸ್ತುತ ಸದರಿ ಯೋಜನೆಯಲ್ಲಿ ಇರುವ ವಿದ್ಯುತ್ ಬಾಕಿ ಎಷ್ಟು ;

(ಉ) ಕಾಮಗಾರಿಗಳು ಮುಕ್ತಾಯಗೊಳ್ಳದೇ ಅನುದಾನ ಪಾವತಿಸಿದ ಯಾವುದಾದರೂ ಪ್ರಕರಣಗಳು ಜಿಲ್ಲೆಯಲ್ಲಿ ಕಂಡುಬಂದಿದೆಯೇ ;

(ಊ) ಕಂಡು ಬಂದಿದ್ದಲ್ಲಿ, ಈ ಕುರಿತು ಸಂಬಂಧಪಟ್ಟವರ ಮೇಲೆ ಜರುಗಿಸಲಾದ ಕ್ರಮಗಳೇನು ?

## ಹೊಸ ಜವಳಿ ನೀತಿ ಜಾರಿ

**ಶ್ರೀ ಅಲ್ಲಮ ಪ್ರಭು ಪಾಟೀಲ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) :–**

೭೫ (೧೧೮) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಹೊಸ ಜವಳಿ ನೀತಿ ಜಾರಿಗೆ ತರಲಾಗುತ್ತಿದೆಯೇ ;

(ಆ) ಇದ್ದಲ್ಲಿ, ಅದರ ವಿವರ ನೀಡುವುದು ;

(ಇ) ಕಲಬುರ್ಗಿಯಲ್ಲಿ ಸ್ಥಾಪಿಸಲಾಗುತ್ತಿರುವ ಜವಳಿ ಪಾರ್ಕಿನ ಸಂಪೂರ್ಣ ಮಾಹಿತಿ ನೀಡುವುದು ;

(ಈ) ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಜವಳಿ ಪಾರ್ಕ್ ಸ್ಥಾಪಿಸಲಾಗಿದೆಯೇ ? (ಸಂಪೂರ್ಣ ವಿವರ ನೀಡುವುದು)

## ವಿವಿಧ ಐ. ಟಿ. ಐ. ಕಾಲೇಜುಗಳು

**ಶ್ರೀ ಅಲ್ಲಮ ಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) :–**

೭೬ (೧೨೦) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ವಿವಿಧ ಐ. ಟಿ. ಐ ಗಳಲ್ಲಿ ೨೦೧೦ರಲ್ಲಿ ಕಿರಿಯ ತರಬೇತಿ ಅಧಿಕಾರಿಗಳೆಂದು (ಜೆಟಿಓ) ನೇಮಕಗೊಂಡಿರುವ ೪೨೦ಕ್ಕೂ ಅಧಿಕ ಜೆಟಿಓಗಳ ಪ್ರೊಬೇಷನರಿ ಅವಧಿ ಇನ್ನೂ ಘೋಷಣೆಯಾಗದಿರಲು ಕಾರಣವೇನು ;

(ಆ) ಪ್ರೊಬೇಷನರಿ ಅವಧಿ ಘೋಷಣೆ ಮಾಡುವಲ್ಲಿ ವಿನಾಃಕಾರಣ ವಿಳಂಬವಾಗಲು ಕಾರಣವೇನು (ವಿವರ ನೀಡುವುದು) ?

## ಕೈಗಾರಿಕಾ ತರಬೇತಿ ಸಂಸ್ಥೆಗಳು

**ಶ್ರೀಮತಿ ಭಾರತಿ ಶೆಟ್ಟಿ (ವಿಧಾನಸಭೆಯಿಂದ ಚುನಾಯಿತರಾದವರು :-**

೭೭ (೧೨೪) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿರುವ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ (ಐ.ಟಿ.ಐ)ಯಲ್ಲಿ ೨೦೧೦ರಲ್ಲಿ ನೇಮಕಗೊಂಡಿರುವ ಕಿರಿಯ ತರಬೇತಿ ಅಧಿಕಾರಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು) ;

(ಆ) ಸರ್ಕಾರದ ನಿಯಮದಂತೆ ಸರ್ಕಾರಿ ನೌಕರಿಗೆ ನೇಮಕಗೊಂಡ ನಂತರ ನೇಮಕಗೊಂಡವರ ಪ್ರೊಬೇಷನರಿ ಅವಧಿ ಎಷ್ಟು ವರ್ಷಗಳಿಗೆ ಸೀಮಿತಗೊಂಡಿರುತ್ತದೆ ;

(ಇ) ಐ.ಟಿ.ಐ. ಯುಲ್ಲಿ ಕಿರಿಯು ತರಬೇತಿ ಅಧಿಕಾರಿಗಳಾಗಿ ನೇಮಕಗೊಂಡು ೩ ವರ್ಷಗಳು ಕಳೆದಿದ್ದು, ಇವರ ಪ್ರೊಬೇಷನರಿ ಅವಧಿ ಪೂರ್ಣಗೊಂಡಿದ್ದರೂ ಇಲಾಖೆ ಖಾಯಂ ಪೂರ್ವ ಅವಧಿಯನ್ನು ಘೋಷಿಸದೇ ಇರಲು ಕಾರಣವೇನು ;

(ಈ) ಇವರ ಖಾಯಂ ಪೂರ್ವ ಅವಧಿಯನ್ನು ಘೋಷಣೆ ಮಾಡಲು ಕೈಗೊಂಡಿರುವ ಕ್ರಮಗಳೇನು; ಯಾವಾಗ ಘೋಷಣೆ ಮಾಡಲಾಗುವುದು ?

## ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾವರು) :–**

೭೮ (೧೨೮) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉಡುಪಿ ಜಿಲ್ಲೆಯಲ್ಲಿರುವ ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರ ಒಟ್ಟು ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು) ;

(ಆ) ಜಿಲ್ಲೆಯಲ್ಲಿ ಕಾರ್ಮಿಕ ಭವಿಷ್ಯ ನಿಧಿ ಹೊಂದಿರುವ ಉದ್ದಿಮೆಗಳ ಒಟ್ಟು ಸಂಖ್ಯೆ ಎಷ್ಟು ; ಅವು ಯಾವುವು ; (ತಾಲ್ಲೂಕುವಾರು ವಿವರ ನೀಡುವುದು) ;

(ಇ) ಕುಂದಾಪುರ, ಉಡುಪಿ ಮತ್ತು ಕಾರ್ಕಳ ತಾಲ್ಲೂಕುಗಳಲ್ಲಿನ ಕಾರ್ಮಿಕ ಇಲಾಖೆಯ ಕಛೇರಿಗಳಿಗೆ ಮಂಜೂರಾತಿಯಾದ ಹುದ್ದೆಗಳ ಸಂಖ್ಯೆ ಎಷ್ಟು ಕೊರತೆ ಇರುವ ಹುದ್ದೆಗಳೆಷ್ಟು ; ಈ ಕೊರತೆಯನ್ನು ತುಂಬಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಈ) ಕಾರ್ಮಿಕ ಇಲಾಖೆಯಲ್ಲಿ ಅಧಿಕಾರಿಗಳ ಮತ್ತು ಸಿಬ್ಬಂದಿಗಳ ಕೊರತೆಯಿಂದಾಗಿ ಈ ಇಲಾಖೆಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಲ್ಲಿ ಇದರ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ವರಾಹ ನೀರಾವರಿ ಯೋಜನೆಗೆ ಮಂಜೂರಾದ ಹುದ್ದೆಗಳು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) :–**

೭೯ (೧೨೯) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ವರಾಹ ನೀರಾವರಿ ಯೋಜನೆಗೆ ಮಂಜೂರಾದ ಹುದ್ದೆಗಳ ಸಂಖ್ಯೆ ಎಷ್ಟು ; ಕೊರತೆ ಇರುವ ಹುದ್ದೆಗಳ ಸಂಖ್ಯೆ ಎಷ್ಟು ; ಈ ಕೊರತೆಯನ್ನು ತುಂಬಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಆ) ಈ ಯೋಜನೆಯಲ್ಲಿ ಯಾವ ಯಾವ ಅಭಿಯಂತರರು, ಯಾವ ಯಾವ ಹುದ್ದೆಗಳಲ್ಲಿ, ಯಾವ ಯಾವ ವರ್ಷ ಕಾರ್ಯನಿರ್ವಹಿಸಿದ್ದಾರೆ (ನಿಯುಕ್ತಿ ಮಾಡಿದ್ದಲ್ಲಿ ಸಂಪೂರ್ಣ ವಿವರ ನೀಡುವುದು) ?

## ಪಟ್ಟಾ ಸ್ಥಳದಲ್ಲಿ ಅರಣ್ಯೀಕರಣ

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು :–**

೮೦ (೧೩೦) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:--

(ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಕಳೆದ ಮೂರು ವರ್ಷಗಳಲ್ಲಿ ಪಟ್ಟಾ ಸ್ಥಳದಲ್ಲಿ ಅರಣ್ಯೀಕರಣ ಮಾಡಿರುವ ರೈತರ

ಸಂಖ್ಯೆ ಎಷ್ಟು ; ಮತ್ತು ಅರಣ್ಯೀಕರಣ ಮಾಡಿರುವ ಒಟ್ಟು ಭೂಮಿಯ ವಿಸ್ತೀರ್ಣವೆಷ್ಟು; (ವಲಯವಾರು ವಿವರ ನೀಡುವುದು)

(ಆ) ಈ ಜಿಲ್ಲೆಗಳ ಕಳೆದ ಮೂರು ವರ್ಷಗಳಲ್ಲಿ ಪಟ್ಟಾ ಸ್ಥಳದಲ್ಲಿ ಅರಣ್ಯೀಕರಣ ಮಾಡಿದ ರೈತರಿಗೆ ಸರ್ಕಾರ ನೀಡಿದ ಒಟ್ಟು ಪ್ರೋತ್ಸಾಹ ಧನವೆಷ್ಟು ? (ವಲಯವಾರು, ವಿಸ್ತೀರ್ಣವಾರು, ವರ್ಷವಾರು ರೈತರು ಹೆಸರು, ವಿಳಾಸದೊಂದಿಗೆ ವಿವರ ನೀಡುವುದು)

**ಕಿಂಡಿ ಅಣೆಕಟ್ಟುಗಳ ನಿರ್ಮಾಣ**

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) :-**

೮೧ (೧೨೭) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಳೆದ ಮೂರು ವರ್ಷಗಳಲ್ಲಿ ಕುಂದಾಪುರ ತಾಲ್ಲೂಕಿನಲ್ಲಿ ಒಂದು ಕೋಟಿಗೂ ಮೇಲ್ಪಟ್ಟು ವೆಚ್ಚದಲ್ಲಿ ನಿರ್ಮಿಸಲಾದ ಕಿಂಡಿ ಅಣೆಕಟ್ಟುಗಳ ಸಂಖ್ಯೆ ಎಷ್ಟು ; ಮತ್ತು ಈ ಕಿಂಡಿ ಅಣೆಕಟ್ಟುಗಳನ್ನು ಯಾವ ಯಾವ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿದೆ ? (ವರ್ಷವಾರು, ಕಿಂಡಿ ಅಣೆಕಟ್ಟುವಾರು ವಿವರ ನೀಡುವುದು)

(ಆ) ಕುಂದಾಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹೆಂಗವಳ್ಳಿಯ ಹಬ್ಬಾಡಿಯಲ್ಲಿ ನಿರ್ಮಿಸಲಾದ ಕಿಂಡಿ ಅಣೆಕಟ್ಟಿನ ಅಂದಾಜು ವೆಚ್ಚವೆಷ್ಟು ; ಈ ಕಾಮಗಾರಿಯ ಕಾರ್ಯನಿರ್ವಹಿಸಿದ ಇಲಾಖೆಯ ವಿವಿಧ ದರ್ಜೆಯ ಅಭಿಯಂತರುಗಳು ಯಾರು ; ಈ ಕಾಮಗಾರಿಯನ್ನು ನಿರ್ವಹಿಸಿದ ಗುತ್ತಿಗೆದಾರರು ಯಾರು ? (ಕಾಮಗಾರಿಯ ಅಂದಾಜು ಪಟ್ಟಿ, ಎಂ. ಬಿ ಪುಸ್ತಕದ ಪ್ರತಿಯೊಂದಿಗೆ ವಿವರ ನೀಡುವುದು)

ಪಿ. ಶ್ರೀಶ್

ಕಾರ್ಯದರ್ಶಿ

ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು-59/ಕಾ.ಸೂ. 03346/1000 ಪ್ರತಿಗಳು/21-06-2014